**<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**
**<u>ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).</u>**
**<u>ಸ್ಪೆಷಲ್ ಕೇಸ್. ನಂ. 5014/2020</u>**

**ಪ್ರಾಸಾ ಃ 5**

**ಚಾಸಾ ಃ 5**

ಸಾಕ್ಷಿಯ ಹೆಸರು ಃ ಮಣಿ

ತಂದೆಯ ಹೆಸರುಃ ಬೋಜ

ವಯಸ್ಸು ಃ 34 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ಅಯ್ಯನಕೇರೆ ಹಾಡಿ

ದಿಃ 16.02.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>**

1. ನಾನು ಅಯ್ಯನಕೇರೆ ಹಾಡಿಯಲ್ಲಿ ವಾಸವಾಗಿದ್ದೇನೆ. ನನಗೆ ಚಾಸಾ 1 ರಿಂದ 3 ರವರ ಪರಿಚಯ ಇದೆ, ಅವರೂ ಕೂಡ ಅಯ್ಯನಕೇರೆ ಹಾಡಿಯಲ್ಲಿ ವಾಸವಾಗಿದ್ದರು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ, ಅವರು ನಮ್ಮ ಪಕ್ಕದ ಊರಿನವರು. ಚಾಸಾ 1 ರವರ ಮೃತ ಮಗಳು ಕೂಡ ಚಾಸಾ 1 ರವರೊಂದಿಗೆ ಅಯ್ಯನಕೇರೆ ಹಾಡಿಯಲ್ಲಿ ವಾಸವಾಗಿದ್ದರು. ಆರೋಪಿಯು ನನ್ನನ್ನು, ಚಾಸಾ 6 ರವರನ್ನು ಮತ್ತು ಮೃತ ಲಕ್ಷ್ಮಿ ಹಾಗೂ ಹಾಡಿಯ ಬೇರೆ ಜನರನ್ನು ಜೀಪಿನಲ್ಲಿ ಬಾಳೆಲೆಗೆ ಕಾಫಿ ಕುಯ್ಯುವ ಕೆಲಸಕ್ಕೆ ಕರೆದಕೊಂಡು ಹೋಗುತ್ತಿದ್ದರು. ದಿಃ 03.02.2020 ರಂದು ಲಕ್ಷ್ಮಿ ಮೃತಪಟ್ಟಿರುತ್ತಾರೆ. ಆ ದಿನ ನನ್ನ ತಮ್ಮ ಕೂಡ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿದ್ದರು. ನನಗೆ ಮೃತ ಲಕ್ಷ್ಮಿ ಸಾವಿನ ಕಾರಣ ಏನು ಎಂದು ನನಗೆ ಗೊತ್ತಿಲ್ಲ. ನನ್ನ



ತಮ್ಮ ದಿಃ 03.02.2020 ರಂದು ಆತ್ಮಹತ್ಯ ಮಾಡಿಕೊಂಡು ಮರಣ ಹೊಂದಿದ ಕಾರಣ ನಾನು ಆತನ ಅಂತ್ಯ ಸಂಸ್ಕಾರದಲ್ಲಿ ತೊಡಗಿದ್ದರಿಂದ ನನಗೆ ಲಕ್ಷ್ಮಿ ಹೇಗೆ ಮೃತಪಟ್ಟಿದ್ದರು ಎಂದು ಗೊತ್ತಾಗಲಿಲ್ಲ. ನಮ್ಮನ್ನು ಜೀಪಿನಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ನಾನು ಹಿಂದಿನ ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದೆ, ಲಕ್ಷ್ಮಿ ಮಧ್ಯದ ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದರು. ನನಗೆ

ತಿತಿಮತಿಯ ಕವಿತಾ ರವರ ಪರಿಚಯ ಇದೆ ಅವರೂ ಕೂಡ ಆಗಾಗ ನಮ್ಮೊಂದಿಗೆ ಕೆಲಸಕ್ಕೆ ಬರುತ್ತಿದ್ದರು. ನನಗೆ ಆರೋಪಿ ಹಾಗೂ ಮೃತ ಲಕ್ಷ್ಮಿಯ ಮಧ್ಯ ಸಂಬಂಧ ಯಾವ ರೀತಿ ಇತ್ತು ಎಂದು ಗೊತ್ತಿಲ್ಲ. ಅವರಿಬ್ಬರೂ ಪ್ರೀತಿಸುತ್ತಿದ್ದ ಬಗ್ಗೆ ಗೊತ್ತಿಲ್ಲ. ಆರೋಪಿ ಹಾಗೂ ಕವಿತಾರವರ ಮಧ್ಯ ಯಾವ ರೀತಿ ಸಂಬಂಧ ಇತ್ತು ಎಂದು ನನಗೆ ಗೊತ್ತಿಲ್ಲ. ಕವಿತಾ ಆರೋಪಿಯ ಪಕ್ಕದಲ್ಲಿ ಕುಳಿತಿದ್ದನ್ನು ನಾನು ನೋಡಿಲ್ಲ. ಲಕ್ಷ್ಮಿ ಹಾಗೂ ಆರೋಪಿಗೆ ಜೀಪಿನಲ್ಲಿ ಗಲಾಟೆಯಾದ ಬಗ್ಗೆ ಗೊತ್ತಿಲ್ಲ. ಆರೋಪಿಯು ಲಕ್ಷ್ಮಿಗೆ ವಿಷ ನೀಡಿ ಸಾಯಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರ ಸಮಕ್ಷಮ ಆರೋಪಿಯ ವಿರುದ್ಧ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**



2. ನಾವು ಎಂದಿನಂತೆ ಆರೋಪಿಯ ಜೀಪಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದಾಗ ಒಂದು ದಿನ ತಿತಿಮತಿಯ ಕವಿತಾ ಎನ್ನುವವರು ಆರೋಪಿಯೊಂದಿಗೆ ಜೀಪಿನ ಮುಂದಿನ ಸೀಟಿನಲ್ಲಿ ಕುಳಿತಿದ್ದ ವಿಚಾರಕ್ಕೆ ಜೀಪಿನಲ್ಲಿ ಕುಳಿತಿದ್ದ ಮೃತ ಲಕ್ಷ್ಮಿಯು ಆರೋಪಿಯೊಂದಿಗೆ ಜಗಳ ಮಾಡಿ ಇಬ್ಬರು ಕೈಯಿಂದ ಹೊಡೆದಾಡಿರುತ್ತಾರೆ ಹಾಗೂ ನಂತರ ಲಕ್ಷ್ಮಿ ಸುಮಾರು 3-4 ದಿನ ಕೆಲಸಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 03.02.2020 ರಂದು ಬೆಳಿಗ್ಗೆ ಎಂದಿನಂತೆ ನನ್ನನ್ನು, ಚಾಸಾ 6 ರವರನ್ನು ಹಾಗೂ ಕಮಲಾ ಮತ್ತು ಇತರರನ್ನು ಜೀಪಿನಲ್ಲಿ ಆರೋಪಿಯು ಕೆಲಸಕ್ಕೆ ಕರೆದುಕೊಂಡು ಹೋಗಿದ್ದು ತಿತಿಮತಿಯಲ್ಲಿ ಉಳಿದ ಕೆಲಸಗಾರರನ್ನು ಹತ್ತಿಸಿ ಬಾಳೆಲೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ನಮ್ಮನ್ನು ಕಾಫಿ ಕುಯ್ಯಲು ಬಿಟ್ಟು ವಾಪಸ್ ಜೀಪಿನೊಂದಿಗೆ ಬಂದಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ ಆರೋಪಿಯು ಇನ್ನೊಬ್ಬ ಡ್ರೈವರ್ ಈಶ್ವರ ರವರೊಂದಿಗೆ ಬಂದಿದ್ದು ಆರೋಪಿಯು ತಿತಿಮತಿಯಲ್ಲಿ ಇಳಿದುಕೊಂಡು ನಮ್ಮನ್ನು ಈಶ್ವರ್ ರವರು ಅಯ್ಯನಕೆರೆಗೆ ಕರೆದುಕೊಂಡು ಬಂದು ಬಿಟ್ಟಿದ್ದರು ಎಂದರೆ ಸರಿಯಲ್ಲ.

ಲಕ್ಷ್ಮಿಯು ಅ ದಿನ ವಿಷ ಕುಡಿದು ಹಣಗೋಡು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ನಂತರ ಹೆಚ್ಚಿನ ಚಿಕಿತ್ಸೆಗೆ ಆಕೆಯನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದು ಚಿಕಿತ್ಸೆ ಫಲಕಾರಿಯಾಗದೇ ಆಕೆ ಮೃತಪಟ್ಟ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಲಕ್ಷ್ಮಿಯು ಆರೋಪಿ ಬೇರೆ ಹುಡುಗಿಯನ್ನು ಪ್ರೀತಿಸುತ್ತಿದ್ದ ವಿಚಾರ ಗೊತ್ತಾಗಿ ಆತನೊಂದಿಗೆ ಜಗಳ



ಮಾಡಿದ ಕಾರಣ ಲಕ್ಷ್ಮಿಯನ್ನು ಕೊಲ್ಲುವ ಉದ್ದೇಶದಿಂದ ಬಾಳೆಲೆ ಗ್ರಾಮದಲ್ಲಿ ಆಕೆಗೆ ಆರೋಪಿ ವಿಷ ಕುಡಿಸಿದ್ದ ಕಾರಣ ಆಕೆ ಚಿಕಿತ್ಸೆ ಫಲಕಾರಿಯಾಗದೇ ದಿಃ 10.02.2020 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 25.02.2020 ರಂದು ನನಗೆ ಈಗ ಓದಿ ಹೇಳಿದಂತೆ " ಕೆಲಸಕ್ಕೆ ಬರುತ್ತಿದ್ದಾಗ ____ ಕರೆದುಕೊಂಡು ಬಂದು ಬಿಟ್ಟು ಹೋಗಿರುತ್ತಾರೆ " ಹಾಗೂ " ವಿಕ್ಕಿಯು ______ ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗಗಳನ್ನು ಒಟ್ಟಾಗಿ ನಿಪಿ 3 ಎಂದು ಗುರುತಿಸಲಾಯಿತು. ನಿಪಿ 3 ರಲ್ಲಿ ಇರುವ ಎಲ್ಲ ವಿಷಯಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ ಃ 6**

**ಚಾಸಾ ಃ 6**

ಸಾಕ್ಷಿಯ ಹೆಸರು ಃ ರಾಮಚಂದ್ರ

ತಂದೆಯ ಹೆಸರುಃ ಲಕ್ಷ್ಮಣ

ವಯಸ್ಸು ಃ 24 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ಅಯ್ಯನಕೆರೆ ಹಾಡಿ

ದಿಃ 16.02.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನನಗೆ ಚಾಸಾ 5 ರವರ ಪರಿಚಯ ಇದೆ. ನನಗೆ ಚಾಸಾ 1 ರಿಂದ 3 ರವರ ಪರಿಚಯ ಅಷ್ಟಾಗಿ ಇಲ್ಲ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ, ಅವರು ನಮ್ಮ ಊರಿನ ಪಕ್ಕದ ಊರಿನವರು. 4 ವರ್ಷಗಳ ಹಿಂದೆ ಆರೋಪಿಯು ನನ್ನನ್ನು ಮತ್ತು ನಮ್ಮ ಹಾಡಿಯ ಜನರನ್ನು ಕಾಫಿ ಕುಯ್ಯುವ ಕೆಲಸಕ್ಕೆ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅವರು ಬಿರುನಾಣಿಗೆ ನನ್ನನ್ನು ಕೆಲಸಕ್ಕೆ ಕರೆದುಕೊಂಡು ಹೋಗಿದ್ದರು, ಬಾಳೆಲೆಗೆ ಕರೆದುಕೊಂಡು ಹೋಗಿಲ್ಲ. ಕವಿತಾ ಎನ್ನುವವರು ನಾವು ಕೆಲಸಕ್ಕೆ ಹೋಗುವಾಗ ನಮ್ಮ ಜೊತೆ ಬಂದಿರಲಿಲ್ಲ. ನನಗೆ ಮೃತ ಲಕ್ಷ್ಮಿಯ ಪರಿಚಯ ಇಲ್ಲ. ಮೃತ ಲಕ್ಷ್ಮಿ ಚಾಸಾ 1 ರವರ ಮಗಳು. ಆಕೆ ನಮ್ಮ ಜೊತೆ ಅಷ್ಟಾಗಿ ಕೆಲಸಕ್ಕೆ ಬರುತ್ತಿರಲಿಲ್ಲ. ಆಕೆ ನಾವು ಕಾವೇರಿ ಎಸ್ಟೇಟ್ ಗೆ ಕೆಲಸಕ್ಕೆ



ಹೋಗುತ್ತಿದ್ದಾಗ ನಮ್ಮೊಂದಿಗೆ ಬರುತ್ತಿದ್ದರು. ಆಕೆ ಜೀಪಿನಲ್ಲಿ ಎಲ್ಲಿ ಕುಳಿತುಕೊಳ್ಳುತ್ತಿದ್ದರು ಎನ್ನುವುದನ್ನು ನಾನು ಗಮನಿಸಿಲ್ಲ. ಜೀಪಿನಲ್ಲಿ ಹೋಗುವಾಗ ಆರೋಪಿ ಹಾಗೂ ಮೃತ ಲಕ್ಷ್ಮಿ ಯವರಿಗೆ ಒಬ್ಬ ಹುಡುಗಿಯ ವಿಚಾರದಲ್ಲಿ ಗಲಾಟೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕೆಲಸ ಮುಗಿಸಿ ರಾತ್ರಿ ಮನೆಗೆ ಬಂದಾಗ ಹಾಡಿಯಲ್ಲಿ ಅಕ್ಕಪಕ್ಕದವರು ಲಕ್ಷ್ಮಿ

ಹಣಗೋಡಿನಲ್ಲಿ ಮೃತಪಟ್ಟಿದ್ದಾರೆ ಎಂದು ಮಾತನಾಡುತ್ತಿದ್ದುದನ್ನು ಕೇಳಿಸಿಕೊಂಡಿರುತ್ತೇನೆ. ಲಕ್ಷ್ಮಿ ಹೇಗೆ ಮೃತಪಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಆಕೆಯ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ಆರೋಪಿ ಲಕ್ಷ್ಮಿಗೆ ವಿಷ ಕುಡಿಸಿದ ಕಾರಣ ಆಕೆ ಮೃತಪಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಸಮಕ್ಷಮ ಆರೋಪಿಯ ವಿರುದ್ಧ ಹೇಳಿಕೆ ನೀಡಿಲ್ಲ. ನಾನು ಲಕ್ಷ್ಮಿಯ ಮೃತ ದೇಹವನ್ನು ನೋಡಲು ಹೋಗಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ನಾವು ಎಂದಿನಂತೆ ಆರೋಪಿಯ ಜೀಪಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದಾಗ ಒಂದು ದಿನ ತಿತಿಮತಿಯ ಕವಿತಾ ಎನ್ನುವವರು ಆರೋಪಿಯೊಂದಿಗೆ ಜೀಪಿನ ಮುಂದಿನ ಸೀಟಿನಲ್ಲಿ ಕುಳಿತಿದ್ದ ವಿಚಾರಕ್ಕೆ ಜೀಪಿನಲ್ಲಿ ಕುಳಿತಿದ್ದ ಮೃತ ಲಕ್ಷ್ಮಿಯು ಆರೋಪಿಯೊಂದಿಗೆ ಜಗಳ ಮಾಡಿ ಇಬ್ಬರು ಕೈಯಿಂದ



ಹೊಡೆದಾಡಿರುತ್ತಾರೆ ಹಾಗೂ ನಂತರ ಲಕ್ಷ್ಮಿ ಸುಮಾರು 3-4 ದಿನ ಕೆಲಸಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 03.02.2020 ರಂದು ಬೆಳಿಗ್ಗೆ ಎಂದಿನಂತೆ ನನ್ನನ್ನು, ಚಾಸಾ 6 ರವರನ್ನು ಹಾಗೂ ಕಮಲಾ ಮತ್ತು ಇತರರನ್ನು ಜೀಪಿನಲ್ಲಿ ಆರೋಪಿಯು ಕೆಲಸಕ್ಕೆ ಕರೆದುಕೊಂಡು ಹೋಗಿದ್ದು ತಿತಿಮತಿಯಲ್ಲಿ ಉಳಿದ ಕೆಲಸಗಾರರನ್ನು ಹತ್ತಿಸಿ ಬಾಳೆಲೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ನಮ್ಮನ್ನು ಕಾಫಿ ಕುಯ್ಯಲು ಬಿಟ್ಟು ವಾಪಸ್ ಜೀಪಿನೊಂದಿಗೆ ಬಂದಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ ಆರೋಪಿಯು ಇನ್ನೊಬ್ಬ ಡ್ರೈವರ್ ಈಶ್ವರ ರವರೊಂದಿಗೆ ಬಂದಿದ್ದು ಆರೋಪಿಯು ತಿತಿಮತಿಯಲ್ಲಿ ಇಳಿದುಕೊಂಡು ನಮ್ಮನ್ನು ಈಶ್ವರ್ ರವರು ಅಯ್ಯನಕೆರೆಗೆ ಕರೆದುಕೊಂಡು ಬಂದು ಬಿಟ್ಟಿದ್ದರು ಎಂದರೆ ಸರಿಯಲ್ಲ. ಲಕ್ಷ್ಮಿಯು ಆ ದಿನ ವಿಷ ಕುಡಿದು ಹಣಗೋಡು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ನಂತರ ಹೆಚ್ಚಿನ ಚಿಕಿತ್ಸೆಗೆ ಆಕೆಯನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದು ಚಿಕಿತ್ಸೆ ಫಲಕಾರಿಯಾಗದೇ ಆಕೆ ಮೃತಪಟ್ಟ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಲಕ್ಷ್ಮಿಯು

ಆರೋಪಿ ಬೇರೆ ಹುಡುಗಿಯನ್ನು ಪ್ರೀತಿಸುತ್ತಿದ್ದ ವಿಚಾರ ಗೊತ್ತಾಗಿ ಆತನೊಂದಿಗೆ ಜಗಳ ಮಾಡಿದ ಕಾರಣ ಲಕ್ಷ್ಮೀಯನ್ನು ಕೊಲ್ಲುವ ಉದ್ದೇಶದಿಂದ ಬಾಳೆಲೆ ಗ್ರಾಮದಲ್ಲಿ ಆಕೆಗೆ ಆರೋಪಿ ವಿಷ ಕುಡಿಸಿದ್ದ ಕಾರಣ ಆಕೆ ಚಿಕಿತ್ಸೆ ಫಲಕಾರಿಯಾಗದೇ ದಿಃ **10.02.2020** ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ **25.02.2020** ರಂದು

**.4.**

ನನಗೆ ಈಗ ಓದಿ ಹೇಳಿದಂತೆ " ನಾನು_____ ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ **4** ಎಂದು ಗುರುತಿಸಲಾಯಿತು. ನಿಪಿ **4** ರಲ್ಲಿ ಇರುವ ಎಲ್ಲ ವಿಷಯಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)